# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 389 (423) |
| ಉತ್ತರಿಸುವ ದಿನಾಂಕ | 13-08-2025 |
| ಮಾನ್ಯ ಸದಸ್ಯರ ಹೆಸರು | ಡಾ:ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಾವೇರಿ-2 ತಂತ್ರಾಂಶದ ಮೂಲಕ ಆಸ್ತಿ ನೋಂದಣಿ ಮಾಡಲು ನಾಗರೀಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಮಸ್ಯೆ ಬಗೆಹರಿಸಲು ಏನು ಕ್ರಮ ಕೈಗೊಂಡಿದೆ: | ಕಾವೇರಿ-2.0 ತಂತ್ರಾಂಶವು ನೂತನ ತಂತ್ರಾಂಶವಾಗಿದ್ದು, ಇದನ್ನು ಜೂನ್-2023 ರ ಅಂತ್ಯಕ್ಕೆ ರಾಜ್ಯದ ಎಲ್ಲಾ ಉಪನೋಂದಣಿ ಕಛೇರಿಗಳಲ್ಲಿ ಅಳವಡಿಸಲಾಗಿರುತ್ತದೆ. ಈ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ದಸ್ತಾವೇಜಿನ ನೋಂದಣಿಗೆ ಸಂಬಂಧಿಸಿದ ಶೇ.90ರಷ್ಟು ಕೆಲಸವನ್ನು ಪೂರ್ಣಗೊಳಿಸಿರುತ್ತಾರೆ. ತಂತ್ರಾಂಶದ ಕಾರ್ಯಾಚರಣೆಯಲ್ಲಿ ಸಾರ್ವಜನಿಕರ ಪಾತ್ರ ಹೆಚ್ಚಾಗಿರುವುದರಿಂದ ಪ್ರಾರಂಭದ ದಿನಗಳಲ್ಲಿ ತಂತ್ರಾಂಶವನ್ನು ಉಪಯೋಗಿಸುವಲ್ಲಿ ಸಾರ್ವಜನಿಕರಿಗೆ ಕೆಲವು ಸಮಸ್ಯೆಗಳು ಕಂಡು ಬಂದಿದ್ದು, ಅವುಗಳನ್ನು ಕಾಲಕ್ರಮೇಣ ಪರಿಹರಿಸಲಾಗಿರುತ್ತದೆ.<br><br>ತಂತ್ರಾಂಶದ ಬಳಕೆಯಲ್ಲಿ ಸಾರ್ವಜನಿಕರು ಎದುರಿಸುವ ಸಮಸ್ಯೆ ಹಾಗೂ ಗೊಂದಲಗಳಿಗೆ ತಕ್ಷಣ ಪರಿಹಾರ ಒದಗಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br><br>**1. ಸಹಾಯವಾಣಿ:** ನೂತನ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಲು ಸಕಾಲ ಕರೆ ಕೇಂದ್ರದ ಸಹಯೋಗದೊಂದಿಗೆ ಇಲಾಖೆಯ ಸಹಾಯ ವಾಣಿಯನ್ನು (080-68265316) ಪ್ರಾರಂಭಿಸಲಾಗಿರುತ್ತದೆ.<br><br>**2. ಟಿಕೇಟಿಂಗ್ ಟೂಲ್:** ಉಪನೋಂದಣಿ ಕಛೇರಿಯಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಟಿಕೇಟಿಂಗ್ ಟೂಲ್ ಒದಗಿಸಲಾಗಿದ್ದು, ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಸದರಿ ಟೂಲ್ ಮುಖಾಂತರ ಆನ್‌ಲೈನ್ ನಲ್ಲಿ ತಾಂತ್ರಿಕ ತಂಡಕ್ಕೆ ತಿಳಿಸಬಹುದಾಗಿದೆ.<br><br>**3. ಸರ್ವೀಸ್ ಡೆಸ್ಕ್:** ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಸಮಯದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲು ಕೇಂದ್ರ ಕಛೇರಿಯಲ್ಲಿ 08 ತಾಂತ್ರಿಕ ಸಿಬ್ಬಂದಿಗಳನ್ನೊಳಗೊಂಡ ಸರ್ವೀಸ್ ಡೆಸ್ಕ್ ಸ್ಥಾಪಿಸಲಾಗಿರುತ್ತದೆ. |

. . . 2

**4. ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್ ಹಾಗೂ ಸಿಸ್ಟಂ ಅಡ್ಮಿನ್:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿಸ್ಟಂ ಅಡ್ಮಿನ್ ಹಾಗೂ ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳನ್ನು ನೇಮಿಸಲಾಗಿರುತ್ತದೆ. ಹಾರ್ಡವೇರ್‌ನಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಸಿಸ್ಟಂ ಅಡ್ಮಿನ್‌ಗಳು ಹಾಗೂ ತಂತ್ರಾಂಶದಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳು ಸಹಕರಿಸುತ್ತಿರುತ್ತಾರೆ.

**5. ಕಾವೇರಿ ಯೋಜನಾ ಉಸ್ತುವಾರಿ ಘಟಕ (KPUM):** ಕೇಂದ್ರ ಕಛೇರಿಯಲ್ಲಿ 05 ತಾಂತ್ರಿಕ ಸದಸ್ಯರನೊಳಗೊಂಡ ಕಾವೇರಿ ಯೋಜನಾ ಉಸ್ತುವಾರಿ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಈ ತಂಡವು ತಂತ್ರಾಂಶದ ಅಭಿವೃದ್ಧಿ, ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗೌರನೆನ್ಸ್ ಸಂಸ್ಥೆಗೆ ಅಗತ್ಯ ತಾಂತ್ರಿಕ ಮಾಹಿತಿ ಒದಗಿಸುತ್ತಿದೆ.

**6. ಸಿಎಸ್‌ಜಿಯಲ್ಲಿನ L2 Support ವ್ಯವಸ್ಥೆ:** ತಂತ್ರಾಂಶದ ಅಭಿವೃದ್ಧಿಗಾರರಾದ ಸಿಎಸ್‌ಜಿ ಸಂಸ್ಥೆಯು ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕಾಗಿ 04 ತಾಂತ್ರಿಕ ಸಿಬ್ಬಂದಿಗಳ L2 Support ವ್ಯವಸ್ಥೆ ಒದಗಿಸಿರುತ್ತದೆ.

**7. ಯುಟ್ಯೂಬ್ ಚಾನಲ್:** ಕಾವೇರಿ ತಂತ್ರಾಂಶದಲ್ಲಿ ವಿವಿಧ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿಡಿಯೋ ಟುಟೋರಿಯಲ್‌ಗಳನ್ನು ಸಿದ್ದಪಡಿಸಿ ಇಲಾಖೆಯ ಯುಟ್ಯೂಬ್ ಚಾನಲ್ ನಲ್ಲಿ ಒದಗಿಸಲಾಗಿರುತ್ತದೆ.

**8. ಪೋಸ್ಟರ್:** ಕಾವೇರಿ-2 ತಂತ್ರಾಂಶದ ಬಗ್ಗೆ ಮಾಹಿತಿಯನ್ನು ನೀಡಲು ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಪ್ರದರ್ಶಿಸಲಾಗಿರುತ್ತದೆ.

**9.ತರಬೇತಿ:** i) ಅಧಿಕಾರಿ / ಸಿಬ್ಬಂದಿ: ಇಲಾಖೆಯ ಎಲ್ಲಾ ಅಧಿಕಾರಿ /ಸಿಬ್ಬಂದಿಗಳಿಗೆ ಕೇಂದ್ರ ಕಛೇರಿಯ ಗಣಕೀಕರಣ ತರಬೇತಿ ಕೋಶದಲ್ಲಿ ಕಾವೇರಿ-2.0 ತಂತ್ರಾಂಶದ ತರಬೇತಿ ನೀಡಲಾಗಿರುತ್ತದೆ.

ii) ಸಾರ್ವಜನಿಕರು /ದಸ್ತಾವೇಜು ಬರಹಗಾರರು/ ವಕೀಲರು: ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿ ತಂತ್ರಾಂಶದ ಬಳಕೆ ಹಾಗೂ ತಂತ್ರಾಂಶದ ಮೂಲಕ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ.

<table>
<tr>
<td>ಆ)</td>
<td>ಈ ತಂತ್ರಾಂಶದ ಮೂಲಕ ಪ್ರತಿ ದಿನ ಎಷ್ಟು ಆಸ್ತಿ ನೋಂದಣಿ ಮಾಡಲಾಗುತ್ತಿದೆ: ಇದುವರೆಗೂ ಎಷ್ಟು ಆಸ್ತಿ ನೋಂದಣಿ ಮಾಡಲಾಗಿದೆ: (ಜಿಲ್ಲಾವಾರು ಮಾಹಿತಿ ನೀಡುವುದು)</td>
<td>ಕಾವೇರಿ-2.0 ತಂತ್ರಾಂಶದಲ್ಲಿ ನೋಂದಣಿಯಾದ ದಸ್ತಾವೇಜುಗಳ ವಿವರಗಳು:
<table>
<tr><th>ಕ್ರ. ಸಂ.</th><th>ವರ್ಷ</th><th>ನೋಂದಣಿಯಾದ ದಸ್ತಾವೇಜುಗಳ ಸಂಖ್ಯೆ</th></tr>
<tr><td>1</td><td>2023-24</td><td>7677</td></tr>
<tr><td>2</td><td>2024-25</td><td>8823</td></tr>
<tr><td>3</td><td>2025-26</td><td>8490</td></tr>
</table>
ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ನೀಡಿದೆ.</td>
</tr>
<tr>
<td>ಇ)</td>
<td>ಆಸ್ತಿ ನೋಂದಣಿ ಮಾಡಲು ನಾಗರೀಕರಿಗೆ ತಾಂತ್ರಿಕ ದೋಷದ ಕಾರಣ ಹೇಳಿ ವಿನಾ ಕಾರಣ ತೊಂದರೆ ಮಾಡಿರುವ ಅಧಿಕಾರಿಗಳ ಮೇಲೆ ದೂರುಗಳು ಬಂದಿದೆಯೇ: ಎಷ್ಟು ದೂರು ಸ್ವೀಕೃತವಾಗಿದೆ: ಈ ಬಗ್ಗೆ ಸರ್ಕಾರವು ಈ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ?</td>
<td>ಆಸ್ತಿ ನೋಂದಣಿಯಲ್ಲಿ ತಾಂತ್ರಿಕ ದೋಷದ ಕಾರಣ ನೀಡಿ ವಿನಾ ಕಾರಣ ತೊಂದರೆ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿರುವುದಿಲ್ಲ.<br><br>ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜಿನ ನೋಂದಣಿಗೆ ಸಾರ್ವಜನಿಕರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಈ ರೀತಿ ಸಲ್ಲಿಕೆಯಾದ ಅರ್ಜಿಗಳನ್ನು ಉಪನೋಂದಣಾಧಿಕಾರಿಗಳು First in First Out (FIFO) ಮಾದರಿಯಲ್ಲಿ ಪರಿಶೀಲಿಸಿ ಶುಲ್ಕಗಳ ಪಾವತಿಗೆ ಸಿಟಿಜನ್ ಲಾಗಿನ್ ಗೆ ಹಿಂದಿರುಗಿಸಬೇಕಾಗುತ್ತದೆ. ಒಂದು ವೇಳೆ ಸಲ್ಲಿಕೆಯಾದ ಅರ್ಜಿಯಲ್ಲಿ ಯಾವುದೇ ಲೋಪಗಳಿದ್ದಲ್ಲಿ ಅದರ ಬಗ್ಗೆ ಷರಾ ನಮೂದಿಸಿ ಅದನ್ನು ಸರಿಪಡಿಸಿ ಮತ್ತೊಮ್ಮೆ ಸಲ್ಲಿಸಲು ಸಿಟಿಜನ್ ಲಾಗಿನ್‌ಗೆ ಹಿಂದಿರುಗಿಸಬೇಕಾಗುತ್ತದೆ.<br><br>ಉಪನೋಂದಣಾಧಿಕಾರಿಗಳಿಂದ ಅನುಮೋದನೆಗೊಂಡು ಬಂದ ಅರ್ಜಿಗಳಿಗೆ ನಿಗದಿತ ಶುಲ್ಕವನ್ನು ಪಾವತಿಸಿ ದಸ್ತಾವೇಜಿನ ನೋಂದಣಿಗೆ ಉಪನೋಂದಣಿ ಕಛೇರಿಯಲ್ಲಿ ದಿನಾಂಕವನ್ನು ನಿಗದಿಪಡಿಸಿಕೊಳ್ಳಬೇಕಾಗುತ್ತದೆ. ಈ ರೀತಿ ಅರ್ಜಿದಾರರೇ ನಿಗದಿಪಡಿಸಿಕೊಂಡ ದಿನಾಂಕ ಹಾಗೂ ಸಮಯಕ್ಕೆ ನೋಂದಣಿಗೆ ಹಾಜರಾಗಬೇಕಾಗುತ್ತದೆ.<br><br>ಮೇಲೆ ತಿಳಿಸಿರುವಂತೆ ದಸ್ತಾವೇಜುಗಳ ನೋಂದಣಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯೂ ಸಂಪೂರ್ಣವಾಗಿ ಆನ್‌ಲೈನ್ ಆಗಿರುವುದರಿಂದ ಕೇವಲ ನೋಂದಣಿ ದಿನಾಂಕದಂದು ಮಾತ್ರ ಉಪನೋಂದಣಿ ಕಛೇರಿಗೆ ಭೇಟಿ ನೀಡಬೇಕಾಗಿರುತ್ತದೆ.<br><br>ಮೇಲೆ ತಿಳಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕಾವೇರಿ-2.0 ತಂತ್ರಾಂಶದಲ್ಲಿ ವಿನಾ ಕಾರಣ ತಾಂತ್ರಿಕ ದೋಷದ ಕಾರಣ ನೀಡಿ ದಸ್ತಾವೇಜನ್ನು ನೋಂದಣಿ ಮಾಡದಿರಲು ಅವಕಾಶವಿರುವುದಿಲ್ಲ.</td>
</tr>
</table>

ಕಂಇ/224/ಎಂಎನ್‌ಎಸ್‌ಎ/2025

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು